ಅರ್.ಬಿ.ಐ./2006–07/212
ಡಿಜಿಬಿಎ.ಸಿಡಿಡಿ.ಸಂ.ಎಚ್.–9743/15.01.001/2006–07

ಡಿಸೆಂಬರ್ 18, 2006

ಅಧ್ಯಕ್ಷರು ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು ಸರಕಾರಿ ಲೆಕ್ಕಪತ್ರ ಇಲಾಖೆ, ಕೇಂದ್ರ ಕಚೇರಿ, ಭಾರತೀಯ ರಿಸರ್ವ್ ಬ್ಯಾಂಕ್, ಭಾರತೀಯ ಸ್ಟೇಟ್ ಬ್ಯಾಂಕ್ / ಸ್ಟೇಟ್ ಬ್ಯಾಂಕ್ ಆಫ್ ಇಂದೂರ್/ ಸ್ಟೇಟ್ ಬ್ಯಾಂಕ್ ಆಫ್ ಪಾಟಿಯಾಲ/ ಸ್ಟೇಟ್ ಬ್ಯಾಂಕ್ ಆಫ್ ಬಿಕನೇರ್ ಮತ್ತು ಜೈಪುರ್/ ಸ್ಟೇಟ್ ಬ್ಯಾಂಕ್ ಆಫ್ ಸೌರಾಷ್ಟ್ರ/ ಸ್ಟೇಟ್ ಬ್ಯಾಂಕ್ ಆಫ್ ಟ್ರಾವಂಕೂರ್/ ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್/ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್/ ಅಲಹಬಾದ್ ಬ್ಯಾಂಕ್ / ಬ್ಯಾಂಕ್ ಆಫ್ ಬರೋಡ / ಬ್ಯಾಂಕ್ ಆಫ್ ಇಂಡಿಯಾ / ಬ್ಯಾಂಕ್ ಆಫ್ ಮಹಾರಾಷ್ಟ್ರ / ಕೆನರಾ ಬ್ಯಾಂಕ್ / ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ / ಕಾರ್ಪೊರೇಷನ್ ಬ್ಯಾಂಕ್ / ದೇನಾ ಬ್ಯಾಂಕ್ / ಇಂಡಿಯನ್ ಬ್ಯಾಂಕ್ / ಇಂಡಿಯನ್ ಓವರ್‌ಸೀಸ್ ಬ್ಯಾಂಕ್ / ಪಂಜಾಬ್ ನ್ಯಾಷನಲ್ ಬ್ಯಾಂಕ್/ ಸಿಂಡಿಕೇಟ್ ಬ್ಯಾಂಕ್ / ಯೂಕೋ ಬ್ಯಾಂಕ್ / ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ /
ಮಾನ್ಯರೇ,

ವಿಶೇಷ ಠೇವಣಿ ಯೋಜನೆ 1975
ಕ್ಯಾಲೆಂಡರ್ ವರ್ಷ 2006 ಕ್ಕೆ ಬಡ್ಡಿ ಪಾವತಿ

ನಮ್ಮ ಸುತ್ತೋಲೆ ಅರ್ ಬಿ ಐ 2005/235 ಸಂ. ಡಿಜಿಬಿಎ. ಸಿಡಿಡಿ. 15.01.001/ಎಚ್–8400/2005–06 ದಿನಾಂಕ 20, 2005 ರನ್ನು ದಯವಿಟ್ಟು ಗಮನಿಸಿ. ಅದರಲ್ಲಿ 2005 ರ ಕ್ಯಾಲೆಂಡರ್ ವರ್ಷಕ್ಕೆ ವಿಶೇಷ ಠೇವಣಿ ಖಾತೆಗಳಲ್ಲಿರುವ ಶಿಲ್ಕಿನ ಮೇಲೆ ಶೇಕಡಾ 8 ರ ದರದಲ್ಲಿ ಬಡ್ಡಿಯನ್ನು ಪಾವತಿಸಬೇಕೆಂದು ಸೂಚಿಸಲಾಗಿದೆ.

2. ಈ ಸಂಬಂಧವಾಗಿ ಮುಂದಿನ ಆದೇಶವನ್ನು ಹೊರಡಿಸುವವರೆಗೂ ವಿಶೇಷ ಠೇವಣಿ ಯೋಜನೆಯ ಮೇಲಿನ ಬಡ್ಡಿದರವು 2006 ರ ಕ್ಯಾಲೆಂಡರ್ ವರ್ಷದಲ್ಲಿ ಯಾವುದೇ ಬದಲಾವಣೆಯಿಲ್ಲದೆ ಶೇ 8/–ರಷ್ಟೇ ಉಳಿಯುತ್ತದೆ. ಅದರಂತೆ 2006 ರ ಕ್ಯಾಲೆಂಡರ್ ವರ್ಷದಲ್ಲಿವಿಶೇಷ ಠೇವಣಿ_ಯೋಜನೆಯನ್ವಯ ಖಾತೆಗಳನ್ನು ಹೊಂದಿರುವ ಖಾತೆದಾರರಿಗೆ ಖಾತಾ ಸಂದಾಯ ಚೆಕ್‌ಗಳ ಮೂಲಕವೇ ಶೇ 8/– ರಂತೆ ಬಡ್ಡಿಯನ್ನು ಪಾವತಿಸಬೇಕೆಂದು ಎಲ್ಲಾ ಠೇವಣಿ ಕಚೇರಿಗಳಿಗೂ ನಿರ್ದೇಶಿಸಬೇಕೆಂದು ನಿಮಗೆ ಸೂಚಿಸಲಾಗಿದೆ.

3. ಜನವರಿ 2007 ರ ಮೊದಲ ವಾರದಲ್ಲಿಯೇ 20006 ರ ಕ್ಯಾಲೆಂಡರ್ ವರ್ಷದ ಖಾತಾದಾರರಿಗೆ ಬಡ್ಡಿಯನ್ನು ಬಟವಾಡೆ ಮಾಡಿರಬೇಕೆಂಬುದನ್ನು ಖಚಿತಪಡಿಸಿಕೊಳ್ಳಬೇಕು. ಎಲ್ಲಾ ಠೇವಣಿ ಕಚೇರಿಗಳಿಗೂ ನಿರ್ದೇಶಿಸಿ ಡಿಸೆಂಬರ್ 30 ರ ನಮ್ಮ ಸುತ್ತೋಲೆಯಲ್ಲಿರುವಂತೆ ಹಾಗೂ ಈಗ ಅನ್ವಯವಾಗುವಂತೆ ನಿರ್ದೇಶನಗಳನ್ನು ಪುನರುಚ್ಚರಿಸಲಾಗಿದೆ( ಪ್ರತಿಯನ್ನು ಅಡಕಗೊಳಿಸಿದೆ)

4. ದಯವಿಟ್ಟು ಸ್ವೀಕೃತಿಯನ್ನು ಧೃಢೀಕರಿಸಿ.

ವಿಶ್ವಾಸದಿಂದ
(ಇಮ್ತಿಯಾಜ್ ಅಹಮ್ಮದ್)
ಉಪ ಮಹಾ ವ್ಯವಸ್ಥಾಪಕರು.